# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 128/2019

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲಿಸರು)**

**ವಿರುದ್ಧ**

**ಆರೋಪಿತರುಃ** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಶಿವಪ್ಪ | ಫ್ರಾಸಾಃ | 10 |
| **ತಂದೆಯ ಹೆಸರುಃ** | ರಾಮಾಂಜಪ್ಪ | ಚಾಸಾಃ | 15 |
| **ವಯಸ್ಸುಃ** | 64 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 04.05.2024 |
| **ಉದ್ಯೋಗಃ** | ವ್ಯವಸಾಯ | | |
| **ವಾಸ ಸ್ಥಳಃ** | ಗಡಿಮಿಂಚೇನಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು. | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

*(ಸಾಕ್ಷಿಗೆ ಕನ್ನಡ ಬರುವುದಿಲ್ಲ. ಆದ್ದರಿಂದ ಸಾಕ್ಷಿ ತೆಲಗು ಭಾಷೆಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಲು ಶ್ರೀ.ಆರ್.ಎಂ.ಕೆ. ವಕೀಲರನ್ನು ನೇಮಿಸಲಾಯಿತು)*

1 ನೇ ಆರೋಪಿ ನನಗೆ ಗೊತ್ತಿಲ್ಲ. ಚಾ.ಸಾ.16 ನನ್ನ ಮಗಳು. ಚಾ.ಸಾ.16 ಳ ಗಂಡನ ಹೆಸರು ಕುಮಾರ್. ಮೃತ ಸರಸ್ವತಮ್ಮ ನನ್ನ ಹೆಂಡತಿ. ಚಿಂತಾಮಣಿ ಗಜಾನನ ಸರ್ಕಲ್ ಬಳಿ ಇರುವ ದೇವಸ್ಥಾನದಲ್ಲಿ ಕೊಟ್ಟಿದ್ದ ಪಾಯಸವನ್ನು ತಿಂದು ನನ್ನ ಹೆಂಡತಿ ಮೃತಪಟ್ಟಿರುತ್ತಾಳೆ. ಸದರಿ ಪ್ರಸಾದವನ್ನು ಒಟ್ಟು 13 ಜನ ಸೇವಿಸಿದ್ದು, ಅದರಲ್ಲಿ ಇಬ್ಬರು

ಹೆಂಗಸರು ಮೃತಪಟ್ಟಿರುತ್ತಾರೆ. ನನ್ನ ಹೆಂಡತಿ ಕೋಲಾರ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾಳೆ. ಅಲ್ಲಿ ಪೋಲಿಸರಿಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ.ಸಿ.ಕೆ. ವಕೀಲರಿಂದಃ</u>**

2) ನಾನು ಕೋಲಾರ ಆಸ್ಪತ್ರೆಯಲ್ಲಿ ಪೋಲಿಸರ ಮುಂದೆ ಹೇಳಿಕೆ ನೀಡಿದಾಗ ದಿನಾಂಕಃ25.01.2019 ರಂದು ........................................................ ........................................................................................... ... ತಿಂದಿದ್ದರಿಂದ ಮೃತಪಟ್ಟಿರುತ್ತಾಳೆ ಎಂದು ಹೇಳಿಕೆ ನೀಡಿರುತ್ತೇನೆಂದರೆ ಸರಿ.

**<u>ಪಾಟೀ ಸವಾಲುಃ 3 ಮತ್ತು 4 ನೇ ಆರೋಪಿತರ ಪರ ವಕೀಲರು ಮೇಲೆ 2 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ04.05.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

ತರ್ಜುಮೆದಾರರ ಸಹಿ